



ಫ್ಲೆಮಿಂಗೋಗಳು ಒಂಟಿ ಕಾಲಿನಲ್ಲಿ ತಪಸ್ಸಿಗೆ ನಿಂತಿದ್ದವು. ಕಾರ್ಮೋರೆಂಟ್ ಗಳು ಮಾತ್ರ ಬೋಳುಗಿಡದ ಮೇಲೆ ರೆಕ್ಕೆಯಗಲಿಸಿ ಮೈಒಣಗಿಸಿಕೊಳ್ಳುತ್ತಾ ತಣ್ಣಗೆ ಕುಳಿತಿದ್ದವು.

ಅತ್ತ ಇತ್ತ ಕತ್ತು ಹೊರಳಿಸುತ್ತಾ ಸಾಗುತ್ತಿದ್ದಾಗ ಅನೂಪ್, 'ಅಲ್ಲಿ ನೋಡು ಕೊಮೊಡೋ ಡ್ರ್ಯಾಗನ್' ಎಂದು ತೋರಿಸಿದ. ಸುತ್ತಲೂ ಬೇಲಿಯಿಂದ ಆವೃತವಾದ ಬಂಡೆಯೊಂದರ ಮೇಲೆ ಚಲನೆಯೇ ಇಲ್ಲದೆ ಅದು ಮಲಗಿತ್ತು. ಕೊಮೊಡೋ ಎಂಬ ದ್ವೀಪದ ನಿವಾಸಿಯಾದ ಭಾರಿ ಗಾತ್ರದ ಹಲ್ಲಿಯ ಜಾತಿಗೆ ಸೇರಿದ ಪ್ರಾಣಿಯೇ ಈ ಕೊಮೊಡೋ ಡ್ರ್ಯಾಗನ್. ಇವು ಹತ್ತು ಅಡಿಗಳವರೆಗೂ ಬೆಳೆಯುತ್ತವೆ. ಉದ್ದಕ್ಕೆ ತಕ್ಕಂತೆ 70 ಕೆ.ಜಿ. ಯವರೆಗೂ ತೂಗುತ್ತವೆ. ಜೀವನಾವಧಿ ಸುಮಾರು 30 ವರ್ಷಗಳು. ಈ ಹೆಬ್ಬಲ್ಲಿಗಳನ್ನು ನೋಡಲು ಆ ದ್ವೀಪಕ್ಕೆ ಹೋಗಲಾಗದವರಿಗೆಂದೇ ಆ ಪಾರ್ಕ್ ನಲ್ಲಿ ಒಂದನ್ನು ತಂದಿರಿಸಿದ್ದರು. ಆ ಡ್ರ್ಯಾಗನ್ ಮಾತ್ರ ತಾನೊಂದು ಸೆಲೆಬ್ರಿಟಿ ಎಂಬುದನ್ನು ಗಣನೆಗೇ ತೆಗೆದುಕೊಳ್ಳದೆ, ಬಂದವರೆಡೆಗೆ ತಿರುಗಿಯೂ ನೋಡದೆ ಬಿದ್ದುಕೊಂಡಿತ್ತು.

ನೋಡಿದ ಸ್ಥಳಗಳನ್ನೆಲ್ಲ ನಕಾಶೆಯಲ್ಲಿ ಗುರುತು ಹಾಕಿಕೊಳ್ಳುತ್ತಾ ಮುಂದೆ ಸಾಗಿದೆವು. ಮೂಲೆಯಲ್ಲಿ ಬೋನಿನಲ್ಲಿ ಬಂಧಿಯಾಗಿದ್ದ 'ಬರ್ಡ್ಸ್ ಆಫ್ ಪ್ಯಾರಡೈಸ್' ಹಕ್ಕಿಗಳು ಬೇಜಾರೆಂಬಂತೆ ಕುಳಿತಿದ್ದವು. ಪಪುವಾ ನ್ಯೂಗಿನಿಯಾ ಕಾಡುಗಳು ಇವುಗಳ ವಾಸಸ್ಥಾನ. ಗಂಡು ಹಾಗೂ ಹೆಣ್ಣು ಹಕ್ಕಿಗಳ ಬಣ್ಣದಲ್ಲಿ ಎದ್ದು ಕಾಣುವಂತಹ ವ್ಯತ್ಯಾಸವಿದೆ. ಹೆಣ್ಣು ಹಕ್ಕಿಗಳನ್ನು ಆಕರ್ಷಿಸಲು ಗಂಡು ಹಕ್ಕಿಗಳು ತಮ್ಮ ಸುಂದರವಾದ ಪುಕ್ಕಗಳನ್ನು ಪ್ರದರ್ಶಿಸುತ್ತಾ, ಮಧುರ ನಿನಾದ ಹೊರಡಿಸುತ್ತಾ ನರ್ತಿಸುತ್ತವೆ. ಇದಕ್ಕಾಗಿ ವಯಸ್ಸಿಗೆ ಬರುವ ಮೊದಲಿನಿಂದಲೂ ಇವು ತಾಲೀಮು ನಡೆಸುತ್ತವಂತೆ! 'ಬರ್ಡ್ಸ್ ಆಫ್ ಪ್ಯಾರಡೈಸ್' ಹಕ್ಕಿಗಳಲ್ಲಿ ಹಲವಾರು ಪ್ರಭೇದಗಳಿದ್ದು ಒಂದೊಂದೂ ತನ್ನದೇ ಆದ ನೃತ್ಯ ಶೈಲಿಯನ್ನು ರೂಢಿಸಿಕೊಂಡಿವೆ.

ಕೃತಕವಾಗಿ ಸೃಷ್ಟಿಸಿದ ಮಳೆ ಕಾಡಿನಲ್ಲಿ ಬಾಲಿಯ ನೇಟಿವ್ ಹಕ್ಕಿಗಳನ್ನು ಕಾಣಬಹುದು. ದಟ್ಟ ಹಳದಿ ಬಣ್ಣದ ಓರಿಯೋಲ್, ಕಪ್ಪು ಬಿಳುಪು– ಬಣ್ಣದ ಸ್ಟಾರ್ಲಿಂಗ್, ಹೆರಾನ್ ಮುಂತಾದ ಹಲವಾರು ಹಕ್ಕಿಗಳು ಅಲ್ಲಿದ್ದವು. ನವಿಲೊಂದು ಗರಿಬಿಚ್ಚಿಕೊಂಡು ತನ್ನ ಅಂದ ಚೆಂದವನ್ನು ತೆರೆದಿಟ್ಟಿತ್ತು.

ಇವೆಲ್ಲಕ್ಕಿಂತ ನನ್ನನು ಮುಖ್ಯವಾಗಿ ನನ್ನನ್ನು ಸೆಳೆದಿದ್ದು ಬಾಲಿ ಮೈನಾ. ಅಚ್ಚ ಬಿಳಿ ಬಣ್ಣದ ಮುದ್ದಾದ ಹಕ್ಕಿ ಇದು. ಕಣ್ಣಿನ ಸುತ್ತ ನೀಲಿ ಉಂಗುರವಿದೆ. ಕೊಕ್ಕು ಕಂದು ಮಿಶ್ರಿತ ಹಳದಿ ಬಣ್ಣದ್ದು. ಇದನ್ನು ಬೇಟೆಯಾಡಿ ಮಾರುವವರ ಸಂಖ್ಯೆ ಅತಿಯಾಗಿ ಇದೀಗ ವಿನಾಶದ ಅಂಚಿನಲ್ಲಿದೆ. ಉಳಿದಿರುವುದು ಕೇವಲ ಬೆರಳೆಣಿಕೆಯಷ್ಟು ಮಾತ್ರ.

'ನ್ಯಾಷನಲ್ ಜಿಯಾಗ್ರಫಿ'ಯ ವಿಡಿಯೋಗಳಲ್ಲಿ ಕಾಕಟ್ಟೂ ಗಳನ್ನು ನೋಡಿದ್ದೆ. ನೋಡಲು ಗಿಳಿಯಂತೆಯೇ ಕಾಣುವ ಇವು, ತಲೆಯ ಮೇಲಿರುವ ಪುಕ್ಕಗಳನ್ನು ಆಗಾಗ ಕಿರೀಟದಂತೆ ಮಾಡಿಕೊಳ್ಳುತ್ತವೆ. ಅವುಗಳನ್ನು ಹತ್ತಿರದಿಂದ ನೋಡುವ ಅವಕಾಶ ಇಲ್ಲಿ ಸಿಕ್ಕಿತು. ಇಂಡೋನೇಷ್ಯಾಕ್ಕೆ ಸೀಮಿತವಾದ ಸಾಲ್ಮನ್ ಕ್ರೆಸ್ಟೆಡ್ ಕಾಕಟ್ಟೂಗಳನ್ನು ಕಂಡೆವು. ಸುಂದರವಾದ ಆಸ್ಟ್ರೇಲಿಯನ್ ಪಾಮ್ ಕಾಕಟ್ಟೂಗಳು ಸಹ ಅಲ್ಲಿದ್ದವು. ಪೂರ್ತಿ ಕಪ್ಪು ಬಣ್ಣದಲ್ಲಿ ಇರುವ ಇವುಗಳಿಗೆ ಕೊಕ್ಕಿನ ಬಳಿ ಕೆಂಪು ಬಣ್ಣವಿದೆ. ಸುಮಾರು 18 ವರ್ಷಗಳವರೆಗೂ ಬದುಕಬಲ್ಲ ಇವು, ಜೀವನ ಸಂಗಾತಿಯನ್ನು ಹುಡುಕಿಕೊಂಡು ಅದರೊಂದಿಗೇ ಕೊನೆಯವರೆಗೆ ಜೀವಿಸುತ್ತವೆ.

ಆ ಉದ್ಯಾನವನದಲ್ಲಿದ್ದ ಹಲವಾರು ಹಕ್ಕಿಗಳನ್ನು ಕೈಯ್ಯ ಮೇಲೆ, ಭುಜದ ಮೇಲೆ ಕೂರಿಸಿಕೊಂಡು ಫೋಟೋ ತೆಗೆಸಿಕೊಳ್ಳಬಹುದಾಗಿತ್ತು. ಈ ಕಪ್ಪು ಸುಂದರಿಯನ್ನು ನನ್ನ ಕೈ ಮೇಲೆ ಕೂರಿಸಿಕೊಂಡೆ. ಸುಖಾಸುಮ್ಮನೆ ಕೂಗುತ್ತಲೇ ಇತ್ತು. ಅನೂಪ್ ತನ್ನ ಕೈಮೇಲಿರಿಸಿಕೊಂಡ. ಅದು ಅವನ ಕಿವಿಯ ಬಳಿಯೇ ಜೋರಾಗಿ ಕಾಕು ಹಾಕಿತು. 'ಅಬ್ಬಾ ನನ್ನ ಕಿವಿ ಹೋಯಿತು' ಎನ್ನುತ್ತಾ, ಅದನ್ನು ಪಕ್ಕದಲ್ಲಿದ್ದ ಗಿಡಕ್ಕೆ ದಾಟಿಸಿದ. ಅಲ್ಲಿದ್ದ ಖಗ ಸಮೂಹವನ್ನು ನೋಡಲು ಮೂರು ಗಂಟೆಗಿಂತ ಹೆಚ್ಚೇ ಸಮಯ ಬೇಕಾಯಿತು.

ಅಲ್ಲಿ ರೆಪ್ಟೈಲ್ ಪಾರ್ಕ್ ಕೂಡಾ ಇದೆ. ವಿವಿಧ ಜಾತಿಯ ಹಾವು, ಮೊಸಳೆಗಳಿವೆ. ಹಸಿವಾದರೆ ಐಸ್ ಕ್ರೀಮ್ ಪಾರ್ಲರ್, ಹೋಟೆಲ್, ಏನಾದರೂ ಸ್ಮರಣಿಕೆ ಅಂಗಡಿಯೂ ಇದೆ. ಅಲ್ಲೊಂದು ಥೀಯೇಟರ್ ನಲ್ಲಿ 4ಡಿ ಸಿನಿಮಾ ಪ್ರದರ್ಶನವಿತ್ತು. ಅದನ್ನು ನೋಡುತ್ತಾ ನಿಧಾನಕ್ಕೆ ಐಸ್ ಕ್ರೀಮ್ ಮೆಲ್ಲುತ್ತಾ ಹೊರಬಂದೆವು. ಹಕ್ಕಿಗಳ ಅಪೂರ್ವ ಲೋಕದ ಪಣ ಎಂದೆಂದಿಗೂ ಮರೆಯಲಾಗದ್ದು. ■